

ಮಗ ಹಾಳಾಗುವನೆಂದು ಗವಿಸಿದ್ದಸ್ವಾಮಿ ಅವನಿಗೊಂದು ಕೆಲಸ ಕೊಡಿಸುವ ಹವಣಿಕೆಯಲ್ಲಿರುವಾಗಲೇ ತಾನು ನಿತ್ಯ ನಡೆದುಕೊಳ್ಳುತ್ತಿದ್ದ ಮಠದ ಆವರಣದಲ್ಲೇ ಪದವಿಪೂರ್ವ ಕಾಲೇಜು ಆರಂಭವಾಗಿ ಅವನ ಆಸೆಗೆ ಇಂಬು ನೀಡಿತ್ತು. ಮಠದ ಅಪಗೊಳನ್ನು ಭೇಟಿಯಾಗಿ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸಿ ಮಗನ ಸಾಹಸಗಾಥೆಯನ್ನು ಸವಿಸ್ತಾರವಾಗಿ ಅವರೆದುರು ಅರುಹಿ ಮಾದೇವಸ್ವಾಮಿಗೆ ಅಟೆಂಡರ್ ಕೆಲಸ ಕೊಡಿಸುವಲ್ಲಿ ಯಶಸ್ವಿಯಾಗಿದ್ದ.

ದಿನಬೆಳಗಾಗೆದ್ದು ಮಠದ ಆವರಣದಲ್ಲಿರುವ ಬಾವಿಯಿಂದ ನೀರುಸೇದಿ ತಲೆಮೇಲೆ ಸುರಿದುಕೊಂಡು ಹಸಿಮೈಯಲ್ಲೇ ತುಂಬಿದ ಕೊಡವನ್ನು ಭುಜದ ಮೇಲಿಟ್ಟುಕೊಂಡು ಮಾರುತೇಶ್ವರನ ಗುಡಿಗೆ ಹೋಗಿ ದೇವರ ತಲೆಯ ಮೇಲೆ ಎರಡು ತಂಬಿಗೆ ನೀರು ಸುರಿದು ಹೂವು, ಗಂಧ, ಅಕ್ಷತೆ ಸಮರ್ಪಿಸಿ ಮಂಗಳಾರತಿ ಮಾಡುವುದರೊಂದಿಗೆ ಮಾದೇವಸ್ವಾಮಿಯ ದಿನದ ಕಾಯಕ ಶುರುವಾಗುತ್ತಿತ್ತು. ಗುಡಿಯ ಪೂಜೆ ಮತ್ತು ಕಾಲೇಜಿನ ಕೆಲಸ ಇವುಗಳ ನಡುವೆ ಬಿಡುವು ಇಲ್ಲದಂತಾಗಿ ಮಾದೇವಸ್ವಾಮಿ ಕ್ರಮೇಣ ತನ್ನ ಪುಂಡಪೋಕರಿ ಗೆಳೆಯರ ಗುಂಪಿನಿಂದ ದೂರಾಗಿ ಒಳ್ಳೆ ನಡತೆ ರೂಢಿಸಿಕೊಂಡು ನೆಂಟರಿಷ್ಟರು ಮತ್ತು ಊರ ಹಿರಿಯರ ಹೊಗಳಿಕೆಗೆ ಪಾತ್ರನಾದ. ಹೆಣ್ಣುಮಕ್ಕಳನ್ನು ಒಬ್ಬೊಬ್ಬರಾಗಿ ಗಂಡನ ಮನೆ ಸೇರಿಸಿದ ಗವಿಸಿದ್ದಸ್ವಾಮಿ ಹತ್ತಿರದ ಬಳಗದಲ್ಲೇ ಅನುರೂಪದ ಕನ್ಯೆಯನ್ನು ಮಗನಿಗೆ ಜೊತೆಯಾಗಿಸಿ ಗುಡಿಯ ಪೂಜೆಯ ಜೊತೆಗೆ ಮನೆಯ ವ್ಯವಹಾರವನ್ನು ಮಾದೇವಸ್ವಾಮಿಗೆ ಒಪ್ಪಿಸಿ ನಿರಾಳನಾದ.

* * *

'ಮಾದೇವಸ್ವಾಮಿ ನಾಳೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಕಾಲೇಜಿನ ಇನ್ಸ್‌ಪೆಕ್ಷನ್‌ಗೆ ಬರ್ತಿದ್ದಾರ. ದೇವರು ದಿಂಡಿರು ಅಂತ ಅವರಿಗೆ ಭಕ್ತಿ ಜಾಸ್ತಿ ಅಂತ. ವಿಶೇಷವಾಗಿ ಮಾರುತಿಯ ಪರಮಭಕ್ತರಂತ. ನಾಳೆ ನೀನೇನು ಕಾಲೇಜಿಗೆ ಬರೋದು ಬ್ಯಾಡ. ಗುಡಿನ್ಯಾಗ ಇದ್ದು ವಿಶೇಷ ಪೂಜೆಗೆ ಬೇಕಾದ ಏರ್ಪಾಡು ಮಾಡ್ಕೋ. ಕ್ಲರ್ಕ್ ಬಿರಾದಾರಗೆ ಕೇಳಿ ಎಷ್ಟು ದುಡ್ಡು ಖರ್ಚಿಗೆ ಬೇಕು ತೆಗೆದುಕೊ. ಪೂಜೆ ಭರ್ಜರಿಯಾಗಬೇಕು. ತುಪ್ಪದಲ್ಲಿ ಹುರಿದ ಗೋಡಂಬಿ, ಯಾಲಕ್ಕಿ, ಬಾದಾಮಿ ಹಾಕಿದ ಪ್ರಸಾದ ಇರಲಿ' ಎಂದು ಕಾಲೇಜಿನ ಪ್ರಿನ್ಸಿಪಾಲ ವೆಂಕಟೇಶ ಪುರೋಹಿತ ಹೇಳಿದಾಗ ಸಭೆಯಲ್ಲಿದ್ದ ಬೋಧಕರ ಬಾಯಲ್ಲಿ ನೀರೂರಿದವು. ಮಾದೇವಸ್ವಾಮಿ ಕ್ಲರ್ಕ್ ಬಿರಾದಾರನಿಂದ ಹಣ ಪಡೆದು ನಾಳಿನ ಪೂಜೆಯ ವಿಷಯವನ್ನೇ ತಲೆಯಲ್ಲಿ ತುಂಬಿಕೊಂಡು ಬೇಕಾದ ಪೂಜಾ ಸಾಮಗ್ರಿಗಳನ್ನು ತರಲು ಪೇಟೆ ಕಡೆ ಹೊರಟ.

ಶಿಕ್ಷಣ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಪದ್ಮನಾಭ ಕುಮಸಿಕರ್ ಮೊದಲು ಕಾಲೇಜಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ, ತರಗತಿಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿ ಹತ್ತಿರದಲ್ಲೇ ಇರುವ ಮಾರುತೇಶ್ವರನ ಗುಡಿಗೆ ಪೂಜೆಗೆಂದು ಆಗಮಿಸಿದರು. ಪ್ರಿನ್ಸಿಪಾಲ್ ವೆಂಕಟೇಶ ಪುರೋಹಿತ ಮತ್ತು ಕಾಲೇಜಿನ ಶಿಕ್ಷಕ ಸಿಬ್ಬಂದಿ ಉಪನಿರ್ದೇಶಕರೊಂದಿಗೆ ಗುಡಿಯ ಪ್ರಾಂಗಣದೊಳಗೆ ಅಡಿಯಿಡುವ ವೇಳೆಗಾಗಲೇ ಮಾದೇವಸ್ವಾಮಿ ಎತ್ತರದ ಧ್ವನಿಯಲ್ಲಿ ಮಂತ್ರಗಳನ್ನು